

# ಉಡುಪಿನಲ್ಲಿ ಹೂವಿನ ಚಿತ್ತಾರ

**ಹೂವಿನ ಚಿತ್ತಾರವಿರುವ ಉಡುಪು ಟ್ರೆಂಡ್ ಆಗಿದೆ. ಇದರ ಜೊತೆಗೆ ಶೂ, ಆ್ಯಕ್ಸೆಸರೀಸ್ ಅನ್ನೂ ಫ್ಲೋರಲ್ ಪ್ರಿಂಟ್ ಇರುವ ವಿನ್ಯಾಸಗಳದ್ದೇ ತೊಟ್ಟರೆ ಅದು ಇನ್ನೂ ಫ್ಯಾಷನಬಲ್ ಆಗಿ ಕಾಣಲು ಸಹಕಾರಿಯಾಗುತ್ತದೆ.**

■ ಕವಿತಾ ವಿನು ಭಟ್ಟ

ಉಡುಪಿನಲ್ಲಿ ಪ್ರಕೃತಿಯ ಪ್ರತಿಫಲನ
ಹಸಿರು ಉಸಿರಿನ ಅಂದದ ಅನುರಣನ
ಸಾವಿರ ಹೂಗಳ ಅಂದದ ಸೀರೆಯಲಿ
ನಗುವ ಹೂಮನಸುಗಳ ಅಲೆಗಳಲಿ
ನವನವೀನ ಲಲಿತ ಕಲೆಗಳು ಸದಾ ಸಾಗಲಿ

ಸುಂದರ ಹೂವುಗಳ ಪ್ರಿಂಟ್ ಇರುವ ಉಡುಪುಗಳಿಗೆ ಫ್ಲೋರಲ್ ಪ್ರಿಂಟ್ ಫ್ಯಾಬ್ರಿಕ್ ಎನ್ನಲಾಗುತ್ತದೆ. ತೊಂಬತ್ತರ ದಶಕದಿಂದಲೂ ಹೂವಿನ ಚಿತ್ತಾರದ ಸೀರೆ ಜನಪ್ರಿಯತೆ ಗಳಿಸಿದೆ. ಚಂದದ ಹೂಗಳ ಡಿಸೈನ್ ಇರುವ ಮಿಡಿ, ಮ್ಯಾಕ್ಸಿ, ಲಂಗದಾವಣಿ, ಶರ್ಟ್ ಡ್ರೆಸ್‌ಗಳೀಗ ಫ್ಯಾಷನ್‌ಪ್ರಿಯರ ಮನಗೆದ್ದಿವೆ. ಇತ್ತೀಚೆಗೆ ಪುರುಷರ ಶರ್ಟ್, ಟೀ ಶರ್ಟ್‌ಗಳಲ್ಲಿಯೂ ಹೂವಿನ ಡಿಸೈನ್ ಕಂಗೊಳಿಸುತ್ತಿದೆ.

**ಫ್ಲೋರಲ್ ಪ್ರಿಂಟ್ ಸೀರೆ**

ಫ್ಲೋರಲ್ ಪ್ರಿಂಟ್ ಎಲ್ಲಾ ಬಗೆಯ ಫ್ಯಾಬ್ರಿಕ್‌ಗಳಿಗೆ ಸೂಟ್ ಆಗುತ್ತದೆ. ರೇಷ್ಮೆ, ಸ್ಯಾಟಿನ್, ಫ್ಯಾನ್ಸಿ, ಕಾಟನ್, ಪೇಪರ್ ಸಿಲ್ಕ್, ಕೈಮಗ್ಗದ ಸೀರೆಗಳಿಗೆ ಒಪ್ಪ ಓರಣವಾಗಿ ಕಾಣುತ್ತದೆ. ಸೀರೆಗಳ ಮೇಲೆ ಅಂದವಾದ ಕಸೂತಿ, ಪೇಂಟಿಂಗ್ ಸ್ಟೋನ್ ವರ್ಕ್‌ಗಳನ್ನು ಮಾಡಿದರೆ ಗ್ರ್ಯಾಂಡ್ ಲುಕ್ ಸಿಗುವುದು ಖಂಡಿತ. ಮದುವೆ, ರಿಸೆಪ್ಷನ್, ಪಾರ್ಟಿಗಳಿಗೆ ಇದು ಪರ್ಫೆಕ್ಟ್ ಚಾಯ್ಸ್.

ತೆಳು ಸೀರೆಯ ಸುತ್ತಲೂ ಹೂವಿನ ಚಿತ್ತಾರವಿದ್ದಾಗ ಸೆರಗಿಗೆ ನೆರಿಗೆ ಮಾಡದೆ ಸಿಂಗಲ್ ಲೇಯರ್‌ನಲ್ಲಿ ಪಿನ್ ಚುಚ್ಚಿದರೆ ಚಂದ ಕಾಣಿಸುತ್ತದೆ. ಗಾಢ ಬಣ್ಣಗಳಾದ ನೀಲಿ, ಹಸಿರು, ಕಪ್ಪು, ಕೆಂಪು ಸೀರೆಗಳ ಮೇಲೆ ತಿಳಿಯಾದ ಪಿಂಕ್, ಲೈಟ್ ಗ್ರೀನ್, ಕೇಸರಿ, ಹಳದಿ, ಪಿಸ್ತಾ ಬಣ್ಣಗಳ ಹೂವಿನ ಪ್ರಿಂಟ್ಸ್ ಅದ್ಭುತ ನೋಟವಾಗಿದೆ. ಒಂದೊಮ್ಮೆ ಸೀರೆಯ ಬಣ್ಣ ತಿಳಿಯಾಗಿದ್ದರೆ ಹೂಗಳು ಗಾಢ ಬಣ್ಣದಲ್ಲಿ ಪ್ರಿಂಟ್ ಆಗಿದ್ದರೆ ಆಕರ್ಷಕ ಎನಿಸುತ್ತದೆ. ಡಾರ್ಕ್ ಕಲರ್‌ನಲ್ಲಿರುವ ಹೂವಿನ ಪ್ರಿಂಟೆಡ್ ಸೀರೆ ಧರಿಸಿದಾಗ ಮೇಕಪ್ ಲೈಟ್ ಆಗಿರಬೇಕು.

ಸೀರೆಯ ಬಣ್ಣ ಮುಖವನ್ನು ಪ್ರತಿಫಲಿಸಿದಾಗ ಮಹಿಳೆಯ ವ್ಯಕ್ತಿತ್ವಕ್ಕೆ ವಿಶೇಷ ಮೆರುಗು. ಕುಳ್ಳಗಿರುವವರಿಗೆ ಸಣ್ಣ ಸಣ್ಣ ಹೂವಿನ ಡಿಸೈನ್ ಇರುವ ಶಿಫಾನ್ ಸೀರೆಯನ್ನು ಆಯ್ಕೆ ಮಾಡಬೇಕು. ಎತ್ತರ ಇದ್ದವರು ದೊಡ್ಡದಾದ ಕೆಲವೇ ಹೂವುಗಳ ಪ್ರಿಂಟಿಂಗ್ ಆಯ್ಕೆ ಮಾಡುವುದು ಉತ್ತಮ. ದೊಡ್ಡದಾದ ಹೂವಿನ ಡಿಸೈನ್‌ಗಳಿಗೆ ಸೀರೆಯ ಬಾರ್ಡರ್ ಕಿರಿದಾಗಿದ್ದರೆ ಚಂದ. ಸಣ್ಣ ಸಣ್ಣ ಹೂಗಳು, ಎಲೆ, ಬಳ್ಳಿಗಳಿಂದ ತುಂಬಿರುವ